## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (ಕೆ.ಎಸ್.ಆರ್.ಎಲ್.ಪಿ.ಎಸ್.) ಗೆ ಹೆಚ್ಚುವರಿ ಸಿಬ್ಬಂದಿಗಳ ಮಂಜೂರಾತಿ ಮಾಡುವ ಕುರಿತು.

ಓದಲಾಗಿದೆ: (1) ಸರ್ಕಾರದ ಆದೇಶ ಸಂಖ್ಯೆ: ಕೆ.ಎಸ್.ಆರ್.ಎಲ್.ಪಿ.ಎಸ್./23/2012-13 ದಿನಾಂಕ: 19.10.2012.

(2) ದಿನಾಂಕ: 20.11.2012ರಂದು ನಡೆದ ಕೆ.ಎಸ್.ಆರ್.ಎಲ್.ಪಿ.ಎಸ್. ನ ಎರಡನೇ ಕಾರ್ಯಕಾರಿ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಗ್ರಾಮಾಂತರ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರನ್ನು ಗುರುತಿಸಿ ಅವರಿಗೆ ಆದಾಯಕರ ಉತ್ಪನ್ನ ಚಟುವಟಿಕೆಗಳಲ್ಲಿ ಸ್ವ-ಉದ್ಯೋಗ ಅವಕಾಶವನ್ನು ಕಲ್ಪಿಸುವ ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ (ಎಸ್.ಜಿ.ಎಸ್.ವೈ) ಯೋಜನೆಯನ್ನು ಕೇಂದ್ರ ಸರ್ಕಾರ ದಿನಾಂಕ: 01.04.1999 ರಿಂದ ಜಾರಿಗೊಳಿಸಿತ್ತು. ನಿಗದಿತ ಅವಧಿಯೊಳಗೆ ದೇಶಾದ್ಯಂತ ಬಡತನ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಈ ಎಸ್.ಜಿ.ಎಸ್.ವೈ. ಯೋಜನೆಯನ್ನು **"ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ" (ಎನ್.ಆರ್.ಎಲ್.ಎಂ.)** ಎಂಬುದಾಗಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಪುನರ್‌ರಚಿಸಿತು. ಬೇರು ಮಟ್ಟದಲ್ಲಿರುವ ಗ್ರಾಮೀಣ ಬಡಜನರಿಗೆ ಸ್ವ-ಉದ್ಯೋಗ ಹಾಗೂ ಕೌಶಲ್ಯಾಧಾರಿತ ಉದ್ಯೋಗ ಅವಕಾಶಗಳನ್ನು ಒದಗಿಸುವುದರ ಮೂಲಕ ನಿರಂತರ ಹಾಗೂ ಗಣನೀಯ ಆದಾಯ ಬರುವಂತೆ ಮಾಡುವುದು ಸದರಿ ಎನ್.ಆರ್.ಎಲ್.ಎಂ. ಯೋಜನೆಯ ಮುಖ್ಯ ಧ್ಯೇಯೋದ್ದೇಶವಾಗಿದೆ. ಈ ಅಭಿಯಾನವನ್ನು ರಾಜ್ಯದಲ್ಲಿ ಕಾರ್ಯಗತಗೊಳಿಸಲು, **ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ** (ಕೆ.ಎಸ್.ಆರ್.ಎಲ್.ಪಿ.ಎಸ್.) ಅನ್ನು ಸಂಘಗಳ ನೋಂದಣಿ ಕಾಯ್ದೆ, 1960ರಡಿ ದಿನಾಂಕ: 28.11.2011ರಂದು ನೋಂದಾಯಿಸಲಾಗಿದೆ. ಮುಂದುವರೆದು, ಪ್ರಥಮ ಹಂತದಲ್ಲಿ ಈ ಯೋಜನೆಯನ್ನು **"ಸಂಜೀವಿನಿ"** ಎಂಬ ಹೆಸರಿನಲ್ಲಿ ರಾಜ್ಯದ 5 ಜಿಲ್ಲೆಗಳ 20 ತಾಲ್ಲೂಕುಗಳಲ್ಲಿ 2011-12ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಎನ್.ಆರ್.ಎಲ್.ಎಂ. ಅಭಿಯಾನದ ಚೌಕಟ್ಟಿನ ಪ್ರಕಾರ, ರಾಜ್ಯ ಮಟ್ಟದಿಂದ ತಾಲ್ಲೂಕು ಮಟ್ಟದವರೆಗೆ ಸಮರ್ಪಣಾ ಮನೋಭಾವ ಹಾಗೂ ಸೇವಾ ತತ್ಪರತೆ ಸಿಬ್ಬಂದಿ ಹೊಂದಿದ ನಿರ್ವಹಣಾ ಘಟಕಗಳನ್ನು ಸ್ಥಾಪಿಸಿ ಈ ಯೋಜನೆಯನ್ನು ಜಾರಿಗೊಳಿಸಬೇಕಾಗಿದೆ. ಈ ದಿಸೆಯಲ್ಲಿ ಕೆ.ಎಸ್.ಆರ್.ಎಲ್.ಪಿ.ಎಸ್. ನ ಪ್ರಥಮ ಕಾರ್ಯಕಾರಿ ಸಮಿತಿ ಸಭೆಯಲ್ಲಿ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಸಿಬ್ಬಂದಿಗಳ ನೇಮಕಾತಿ ಮಾಡಲು ನಿರ್ಧರಿಸಲಾಗಿತ್ತು. ಅದರಂತೆ, ಸದರಿ ಹುದ್ದೆಗಳ ಸೃಜಿಸುವ ಕುರಿತಂತೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗಿ, ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್.ಡಿ. 349 ವೆಚ್ಚ-6/2011 ದಿನಾಂಕ 10.07.2012ರಲ್ಲಿ ರಾಜ್ಯ/ಜಿಲ್ಲಾ/ತಾಲ್ಲೂಕು ನಿರ್ವಹಣಾ ಘಟಕಗಳಿಗೆ ಅಗತ್ಯವಿರುವ 193 ಸಿಬ್ಬಂದಿಗಳ (ಅಭಿಯಾನ ನಿರ್ದೇಶಕರ ಹುದ್ದೆಯನ್ನು ಹೊರತುಪಡಿಸಿ) ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು ಸಹಮತಿ ನೀಡಿತ್ತು. ಇದಲ್ಲದೇ, ಆರ್ಥಿಕ ಇಲಾಖೆಯು ಎನ್.ಆರ್.ಎಲ್.ಎಂ.ಗೆ ಒಂದು ಅಭಿಯಾನ ನಿರ್ದೇಶಕರ ಹುದ್ದೆಯನ್ನು ಸೃಜಿಸಲು ಅನುಮೋದನೆ ನೀಡಿತ್ತು ಹಾಗೂ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಒಂದು ಹುದ್ದೆಯನ್ನು ಅಪರ ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಂ., ಎಂದು ಮರುಪದನಾಮೀಕರಿಸಲು ಸಹ ಒಪ್ಪಿಗೆ ನೀಡಿತ್ತು. ಆರ್ಥಿಕ ಇಲಾಖೆಯಿಂದ 193 ಸಿಬ್ಬಂದಿಗಳ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಪಡೆಯಲು ಸಹಮತಿ

ಪಡೆದ ನಂತರ, 193 ಹುದ್ದೆಗಳ ಪೈಕಿ ಒಟ್ಟು 88 ಹುದ್ದೆಗಳನ್ನು ಹಾಗೂ ಒಂದು ಅಭಿಯಾನ ನಿರ್ದೇಶಕರ ಹುದ್ದೆಯನ್ನು ಮೇಲೆ (1) ರಲ್ಲಿ ಓದಲಾದ ದಿನಾಂಕ 19-10-2010 ರ ಆದೇಶದಲ್ಲಿ ಸೃಜಿಸಿ ಹೊರಡಿಸಲಾಗಿದೆ. ಇಲಾಖೆಯಲ್ಲಿ ಅಸ್ತಿತ್ವದಲ್ಲಿರುವ ಒಂದು ಹುದ್ದೆಯನ್ನು ಅಪರ ಅಭಿಯಾನ ನಿರ್ದೇಶಕರ ಹುದ್ದೆ ಎಂದು ಮರುಪದನಾಮೀಕರಿಸಿ ಆದೇಶ ಹೊರಡಿಸುವ ಕುರಿತಂತೆ ಪ್ರತ್ಯೇಕವಾಗಿ ಪರಿಶೀಲನೆಯಲ್ಲಿದೆ.

ಮುಂದುವರೆದು, ಕೆ.ಎಸ್.ಆರ್.ಎಲ್.ಪಿ.ಎಸ್. ನ ಅಧಿಕಾರಿಗಳು ಭಾರತ ಸರ್ಕಾರದ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿದಾಗ, ಅಭಿಯಾನವು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕಾದರೆ ವಿವಿಧ ವಿಷಯಾಧಾರಿತ ತಜ್ಞರನ್ನು ನಿರ್ದಿಷ್ಟ ಘಟಕಗಳಿಗೆ ಅವಶ್ಯಕ ಸಂಖ್ಯೆಯಲ್ಲಿ ನಿಯೋಜಿಸಬೇಕು ಎಂದು ಸೂಚಿಸಿರುತ್ತಾರೆ ಹಾಗೂ ಈ ನಿಟ್ಟಿನಲ್ಲಿ ಭಾರತ ಸರ್ಕಾರದ ಅಜೀವಿಕ ಎನ್.ಆರ್.ಎಲ್.ಎಂ. ಸೂಚಿಸಿರುವಂತೆ ಒಟ್ಟು 275 ಸಿಬ್ಬಂದಿಗಳ ಸೇವೆಯು ಅಗತ್ಯವಿದೆ ಎಂಬುದು ಮನವರಿಕೆಯಾಗಿದೆ. ಸದರಿ ಸಿಬ್ಬಂದಿ ರಚನೆ ಕುರಿತು ಮೇಲೆ (2) ರಲ್ಲಿ ಓದಲಾದ ದಿನಾಂಕ 20/11/2012ರಂದು ನಡೆದ ಕೆ.ಎಸ್.ಆರ್.ಎಲ್.ಪಿ.ಎಸ್. ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ, ಒಟ್ಟಾರೆ ಅವಶ್ಯವಿರುವ 275 ಸಿಬ್ಬಂದಿ ಪೈಕಿ ಈಗಾಗಲೇ ಮಂಜೂರಾದ 193 ಹುದ್ದೆಗಳನ್ನು ಹೊರತುಪಡಿಸಿ ಉಳಿದ 82 ಸಿಬ್ಬಂದಿಗಳ ಮಂಜೂರಾತಿ ಸೇರಿದಂತೆ, ರಾಜ್ಯ ಘಟಕಕ್ಕೆ ಈಗಾಗಲೇ ಮಂಜೂರಾದ ಕೆಲವು ಹುದ್ದೆಗಳನ್ನು ಕೆಳಕಂಡಂತೆ ಪುನರ್‌ಪದನಾಮೀಕರಿಸಲು ತೀರ್ಮಾನಿಸಲಾಗಿದೆ:

| ರಾಜ್ಯ ಅಭಿಯಾನ ನಿರ್ವಹಣಾ ಘಟಕ (ಎಸ್.ಎಂ.ಎಂ.ಯು.) | | |
|---|---|---|
| ಹಳೆ ರಚನೆ ಪ್ರಕಾರ ಸಿಬ್ಬಂದಿ ಪದನಾಮ | | ಪುನರ್‌ರಚಿತ ಪದನಾಮ |
| 1. | ಯೋಜನಾ ವ್ಯವಸ್ಥಾಪಕರು | ರಾಜ್ಯಕಾರ್ಯಕ್ರಮ ವ್ಯವಸ್ಥಾಪಕರು |
| 2. | ಕಾರ್ಯನಿರ್ವಾಹಕರು/ ಸಂಶೋದನಾ ಸಹಾಯಕರು | ಯೋಜನಾ ಸಹಾಯಕರು |
| 3. | - | ಸಹಾಯಕ ವ್ಯವಸ್ಥಾಪಕರು (ಹೊಸ ಹುದ್ದೆ) |

ರಾಜ್ಯ ಘಟಕಕ್ಕೆ ಈಗಾಗಲೇ ಮಂಜೂರಾಗಿರುವ ಡಾಟಾ ಎಂಟ್ರಿ ಆಪರೇಟರ್ಸ್ ಮತ್ತು ಗ್ರೂಪ್-ಡಿ ಸಿಬಂದಿ ಕುರಿತ ರಚನೆಯಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ. ಮುಂದುವರೆದು, ಜಿಲ್ಲಾ ಮತ್ತು ತಾಲ್ಲೂಕು ನಿರ್ವಹಣಾ ಘಟಕಗಳಿಗೆ ಸಂಬಂಧಿಸಿದಂತೆ ಈಗಾಗಲೇ ಮಂಜೂರಾದ ಹುದ್ದೆಗಳು ಹಾಗೂ ಹೆಚ್ಚುವರಿಯಾಗಿ ಮಂಜೂರು ಮಾಡಬೇಕಾಗಿರುವ ಕೆಲವು ಹುದ್ದೆಗಳ ಮರು ಪದನಾಮೀಕರಣ ಮಾಡುವುದು ಅವಶ್ಯವಿದೆಯೆಂದು ಸದರಿ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿದೆ. ಈ ತೀಮಾನದನ್ವಯ ಪರಿಷ್ಕೃತ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಿ ಪರಿಶೀಲಿಸಲಾಗಿದ್ದು ಸದರಿ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಎಫ್‌ಡಿ 414 ವೆಚ್ಚ-6/2012 ದಿನಾಂಕ: 25.02.2013 ರಲ್ಲಿ ಸಹಮತಿ ನೀಡಿರುತ್ತದೆ.

ಆದುದರಿಂದ, ಮೇಲೆ ತಿಳಿಸಿದಂತೆ ಪುನರ್‌ಪದನಾಮೀಕರಣದ ಜೊತೆಗೆ ಈ ಕೆಳಗೆ ವಿವರಿಸಿದಂತೆ ಹುದ್ದೆಗಳನ್ನು ಮಂಜೂರು ಮಾಡಬೇಕಿದೆ.

1. **ರಾಜ್ಯ ಅಭಿಯಾನ ನಿರ್ವಹಣಾ ಘಟಕ:** ಈಗಾಗಲೇ 14 ಹುದ್ದೆಗಳನ್ನು ಮಂಜೂರು ಮಾಡಲಾಗಿದ್ದು, ಹೆಚ್ಚುವರಿ 21 ಹುದ್ದೆಗಳನ್ನು ಸೃಜಿಸಬೇಕಾಗಿರುತ್ತದೆ.
2. **ಜಿಲ್ಲಾ ಅಭಿಯಾನ ನಿರ್ವಹಣಾ ಘಟಕ:** ಈಗಾಗಲೇ 40 ಹುದ್ದೆಗಳನ್ನು ಮಂಜೂರು ಮಾಡಲಾಗಿದ್ದು ಹೆಚ್ಚುವರಿ 40 ಹುದ್ದೆಗಳನ್ನು ಸೃಜಿಸಬೇಕಾಗಿರುತ್ತದೆ.

3. **ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕ:** 35 ಹುದ್ದೆಗಳು ಈಗಾಗಲೇ ಮಂಜೂರು ಮಾಡಲಾಗಿದ್ದು ಹೆಚ್ಚುವರಿ 125 ಹುದ್ದೆಗಳನ್ನು ಸೃಜಿಸಬೇಕಾಗಿರುತ್ತದೆ.
4. ಆರ್ಥಿಕ ಇಲಾಖೆಯು ಈ ಅಭಿಯಾನದ ಅನುಷ್ಠಾನಕ್ಕೆ ಒಟ್ಟು 275 ವಿವಿಧ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಿದ್ದು, ತಾಲ್ಲೂಕು ಮಟ್ಟದ ಘಟಕಕ್ಕೆ ಸರ್ಕಾರಿ ಆದೇಶ ದಿನಾಂಕ: 19.10.2012ರಲ್ಲಿ ಮಂಜೂರಾಗಿದ್ದ ಗ್ರೂಪ್-ಡಿ 5 ಹುದ್ದೆಗಳ ಅವಶ್ಯಕತೆ ಈಗ ಇರುವುದಿಲ್ಲ. ಆರ್ಥಿಕ ಇಲಾಖೆಯು ಒಟ್ಟಾರೆ ನೀಡಿರುವ 275 ಹುದ್ದೆಗಳಿಗೆ ಸೀಮಿತಗೊಳಿಸಿ, ಗ್ರೂಪ್-ಡಿ ಹುದ್ದೆಗಳಿಗೆ ಬದಲಾಗಿ ಅವಶ್ಯವಿರುವ ಬೇರೆ ಹುದ್ದೆಗಳನ್ನು ಸೃಜಿಸಲು ಕಾರ್ಯಕಾರಿ ಸಮಿತಿಯು ಅನುಮೋದನೆ ನೀಡಿರುತ್ತದೆ.

ಆದುದರಿಂದ ಈ ಆದೇಶ:

**ಸರ್ಕಾರಿ ಆದೇಶ ಸಂಖ್ಯೆ.ಕೆಎಸ್‌ಆರ್‌ಎಲ್‌ಪಿಎಸ್/23/2012-2013**
**ಬೆಂಗಳೂರು, ದಿನಾಂಕ: 24ನೇ ಆಗಸ್ಟ್, 2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಸರ್ಕಾರಿ ಆದೇಶ ಸಂಖ್ಯೆ ಕೆಎಸ್‌ಆರ್‌ಎಲ್‌ಪಿಎಸ್/ 23/ 2012-13 ದಿನಾಂಕ 19-10-2012 ಅನ್ನು ಭಾಗಶ: ಮಾರ್ಪಡಿಸಿ ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ/ ಜಿಲ್ಲಾ/ ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳಿಗೆ ಈ ಕೆಳಕಂಡ ಸಿಬ್ಬಂದಿಯ ಸೇವೆಯನ್ನು ಹೊರಗುತ್ತಿಗೆಯ ಮೂಲಕ ಪಡೆಯಲು ಸರ್ಕಾರದ ಮಂಜೂರಾತಿ ನೀಡಿದೆ:

ರಾಜ್ಯ ಅಭಿಯಾನ ನಿರ್ವಹಣಾ ಘಟಕ (ಎಸ್.ಎಂ.ಎಂ.ಯು.) ಕ್ಕೆ ಸರ್ಕಾರಿ ಆದೇಶ ಸಂಖ್ಯೆ ಕೆಎಸ್‌ಆರ್‌ಎಲ್‌ಪಿಎಸ್/23/2012-13 ದಿನಾಂಕ 19-10-2012 ರಲ್ಲಿ ಮಂಜೂರಾದ 14 ಹುದ್ದೆಗಳ ಜೊತೆಗೆ ಕೆಳಕಂಡ ಹುದ್ದೆಗಳನ್ನು ಸೃಜಿಸಿದೆ:

| ರಾಜ್ಯ ಅಭಿಯಾನ ನಿರ್ವಹಣಾ ಘಟಕ (ಎಸ್.ಎಂ.ಎಂ.ಯು.) | | |
|---|---|---|
| ಕ್ರ.ಸಂ | ಹುದ್ದೆ | ಸಂಖ್ಯೆ |
| 1. | ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು | 2 |
| 2. | ಸಹಾಯಕ ವ್ಯವಸ್ಥಾಪಕರು | 9 |
| 3. | ಯೋಜನಾ ಸಹಾಯಕರು | 5 |
| 4. | ಆಪ್ತ ಸಹಾಯಕರು/ ಡಾಟಾ ಎಂಟ್ರಿ ಆಪರೇಟರ್/ ಗ್ರೂಪ್.ಡಿ/ ಚಾಲಕರು | 5 |
| | ಒಟ್ಟು | 21 |

ಮುಂದುವರೆದು, ದಿನಾಂಕ 19-10-2012 ರ ಸರ್ಕಾರಿ ಆದೇಶದಲ್ಲಿ ಸೃಜನೆಯಾಗಿದ್ದ ಯೋಜನಾ ವ್ಯವಸ್ಥಾಪಕರ ಹುದ್ದೆಯನ್ನು "ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕ" ಹಾಗೂ ಕಾರ್ಯನಿರ್ವಾಹಕರು/ಸಂಶೋಧನಾ ಸಹಾಯಕರ ಹುದ್ದೆಯನ್ನು "ಯೋಜನಾ ಸಹಾಯಕ" ಎಂದು ಪದನಾಮೀಕರಿಸಿದೆ.

ಜಿಲ್ಲಾ ಅಭಿಯಾನ ನಿರ್ವಹಣಾ ಘಟಕ (ಡಿ.ಎಂ.ಎಂ.ಯು.) ಕ್ಕೆ ಸರ್ಕಾರಿ ಆದೇಶ ಸಂಖ್ಯೆ ಕೆಎಸ್‌ಆರ್‌ಎಲ್‌ಪಿಎಸ್/23/2012-13 ದಿನಾಂಕ 19-10-2012 ರಲ್ಲಿ ಮಂಜೂರಾದ 40 ಹುದ್ದೆಗಳ ಜೊತೆಗೆ ಕೆಳಕಂಡ ಹುದ್ದೆಗಳನ್ನು ಸೃಜಿಸಿದೆ:-

| ಜಿಲ್ಲಾ ಅಭಿಯಾನ ನಿರ್ವಹಣಾ ಘಟಕ (ಡಿ.ಎಂ.ಎಂ.ಯು.) | | |
|---|---|---|
| ಕ್ರ.ಸಂ | ಹುದ್ದೆ | ಸಂಖ್ಯೆ |
| 1. | ಜಿಲ್ಲಾ ವ್ಯವಸ್ಥಾಪಕರು | 4 |
| 2. | ಕಾರ್ಯನಿರ್ವಾಹಕ ಸಹಾಯಕರು (ಹೊಸ ಹುದ್ದೆ) | 3 |
| 3. | ಸಹಾಯಕರು/ ಲೆಕ್ಕಿಗರು | 1 |
| **5 ಜಿಲ್ಲೆಗಳಿಗೆ ತಲಾ 8 ರಂತೆ ಒಟ್ಟು (5X8)** | | 40 |

ದಿನಾಂಕ 19-10-2012 ರ ಸರ್ಕಾರಿ ಆದೇಶದಲ್ಲಿ ಜಿಲ್ಲಾ ಘಟಕಕ್ಕೆ ಸೃಜನೆಯಾಗಿದ್ದ ಉಪ ಅಭಿಯಾನ ವ್ಯವಸ್ಥಾಪಕರು ಹುದ್ದೆಯನ್ನು "ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು" ಹಾಗೂ ವ್ಯವಸ್ಥಾಪಕರ ಹುದ್ದೆಯನ್ನು "ಜಿಲ್ಲಾ ವ್ಯವಸ್ಥಾಪಕರು" ಎಂಬುದಾಗಿ ಪದನಾಮೀಕರಿಸಿದೆ. ಅಲ್ಲದೆ, ಲೆಕ್ಕಿಗ ಮತ್ತು ಕಛೇರಿ ಸಹಾಯಕರ ಹುದ್ದೆಗಳನ್ನು "ಸಹಾಯಕರು/ಲೆಕ್ಕಿಗರು" ಎಂಬುದಾಗಿ ಪದನಾಮೀಕರಿಸಿದೆ.

ಮುಂದುವರೆದು, ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕ (ಟಿ.ಎಂ.ಎಂ.ಯು.) ಕ್ಕೆ ಸರ್ಕಾರಿ ಆದೇಶ ಸಂಖ್ಯೆ ಕೆಎಸ್‌ಆರ್‌ಎಲ್‌ಪಿಎಸ್/23/2012-13 ದಿನಾಂಕ 19-10-2012 ರಲ್ಲಿ 5 ತಾಲ್ಲೂಕುಗಳಿಗೆ ಮಂಜೂರಾಗಿರುವ 35 ಹುದ್ದೆಗಳ ಪೈಕಿ 5 ಗ್ರೂಪ್-ಡಿ ಹುದ್ದೆಗಳನ್ನು ಅವಶ್ಯಕತೆ ಇಲ್ಲದ ಕಾರಣ ಅವುಗಳನ್ನು ಹೊರತುಪಡಿಸಿ, 30 ಹುದ್ದೆಗಳು ಮಂಜೂರಾಗಿದ್ದವು ಎಂದು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಸದರಿ ಹುದ್ದೆಗಳ ಜೊತೆಗೆ ಕೆಳಕರಡ ಹುದ್ದೆಗಳನ್ನು ಸೃಜಿಸಿದೆ:

| ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕ (ಟಿ.ಎಂ.ಎಂ.ಯು.) | | |
|---|---|---|
| ಕ್ರ. ಸಂ | ಹುದ್ದೆ | ಸಂಖ್ಯೆ |
| 1 | ಕ್ಲಸ್ಟರ್ ಮೇಲ್ವಿಚಾರಕರು (5 ತಾಲ್ಲೂಕುಗಳಿಗೆ ತಲಾ 2 ರಂತೆ) | 10 |
| 2 | ಉಳಿದ 15 ತಾಲ್ಲೂಕುಗಳಿಗೆ | |
| | (ಎ) ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು (ಪ್ರತಿ ತಾಲ್ಲೂಕಿಗೆ ಒಂದರಂತೆ) | 15 |
| | (ಬಿ) ಕಛೇರಿ ಸಹಾಯಕರು (ಪ್ರತಿ ತಾಲ್ಲೂಕಿಗೆ 2 ರಂತೆ) | 30 |
| | (ಸಿ) ಕ್ಲಸ್ಟರ್ ಮೇಲ್ವಿಚಾರಕರು(ಪ್ರತಿ ತಾಲ್ಲೂಕಿಗೆ 5 ರಂತೆ) | 75 |
| ಒಟ್ಟು | | 130 |

ದಿನಾಂಕ 19-10-2012 ರ ಸರ್ಕಾರಿ ಆದೇಶದಲ್ಲಿ ತಾಲ್ಲೂಕು ಘಟಕಕ್ಕೆ ಸೃಜನೆಯಾಗಿದ್ದ ತಾಲ್ಲೂಕು ಅಭಿಯಾನ ವ್ಯವಸ್ಥಾಪಕರು ಹುದ್ದೆಯನ್ನು "ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು" ಹಾಗೂ ಪ್ರದೇಶ ಸಮನ್ವಯಾಧಿಕಾರಿ ಮತ್ತು ಸಮುದಾಯ ಸಮನ್ವಯಾಧಿಕಾರಿ ಎಂಬ ಹುದ್ದೆಗಳನ್ನು "ಕ್ಲಸ್ಟರ್ ಮೇಲ್ವಿಚಾರಣಾಧಿಕಾರಿ" ಎಂದು ಪದನಾಮೀಕರಿಸಿದೆ.

ಈ ಬಾಬ್ತು ತಗಲುವ ವೆಚ್ಚವನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಡಿ ಒದಗಿಸಲಾಗಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 349 ವೆಚ್ಚ-6/2011 ದಿನಾಂಕ: 10.07.2012 ಮತ್ತು ಸಂಖ್ಯೆ ಆಇ 414 ವೆಚ್ಚ 6/2011 ದಿನಾಂಕ: 25.02.2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಅವರ ಹೆಸರಿನಲ್ಲಿ

(ಹೆಚ್.ಸಿ. ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಎಂ.ಜಿ.ಎನ್.ಆರ್.ಇ.ಜಿ.ಎ., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.
3) ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಂ. ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.
4) ಎಲ್ಲಾ ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.
5) ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.
6) ನಿರ್ದೇಶಕರು, ಎನ್.ಐ.ಸಿ. ಬೆಂಗಳೂರು.
7) ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
8) ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
9) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಪತ್ರ ಮುಖೇನ.
10) ಮುಖ್ಯ ಸಂಪಾದಕರು, ಸಾರ್ವಜನಿಕ ಸಂಪರ್ಕಾಧಿಕಾರಿ, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ – ಮುಂದಿನ ಸಂಚಿಕೆಯಲ್ಲಿ ಇದನ್ನು ಪ್ರಚುರಪಡಿಸಲು ಕೋರಿದೆ.

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) / ಹೆಚ್ಚುವರಿ ಕಾರ್ಯದರ್ಶಿ (ಆಡಳಿತ) / ಉಪ ಕಾರ್ಯದರ್ಶಿ (ಆ) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.